**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಅರುಣ ಶಹಾಪೂರ ಇವರು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆ.**

## ವಿಷಯ

ವಿಜಯಪುರ, ಬಾಗಲಕೋಟೆ, ಬೆಳಗಾವಿ ಮತ್ತು ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಗಳಲ್ಲಿ ಸರ್ಕಾರಿ ಹಾಗೂ ಅನುದಾನಿತ ಪದವಿ ಕಾಲೇಜಿನ ಪ್ರಾಧ್ಯಾಪಕರು ಹಾಗೂ ಪ್ರಾಚಾರ್ಯರ ಮತ್ತು ಬೋಧಕೇತರ ಸಿಬ್ಬಂದಿಗಳ ಮುಂಬಡ್ತಿಯ ಪ್ರಸ್ತಾವನೆಗಳು ಹಾಗೂ ಸ್ಥಗಿತ ವೇತನ ಬಡ್ತಿಯ ಪ್ರಸ್ತಾವನೆಗಳು, ಸೇವಾ ಸೌಲಭ್ಯಗಳು, ಪಿಂಚಣಿ ಉಪಧಾನಕ್ಕಾಗಿ ಬಂದ ಪ್ರಸ್ತಾವನೆಗಳು ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ ಹಾಗೂ ಆಯುಕ್ತಾಲಯ, ಶಿಕ್ಷಣ ಇಲಾಖೆ, ಬೆಂಗಳೂರು ಈ ಕಛೇರಿಗಳಲ್ಲಿ ವಿಳಂಬವಾಗಿ ವಿಲೇವಾರಿಯಾಗುತ್ತಿರುವುದರಿಂದ ಬೋಧಕ ಬೋಧಕೇತರ ಸಿಬ್ಬಂದಿಗಳು ಪದೆ ಪದೇ ಕಛೇರಿಗಳಿಗೆ ಅಲೆದಾಡುವ ಸಂದರ್ಭ ಬಂದೊದಗಿದೆ. ಈ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳುವ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಹಾಗೂ ವಿಜ್ಞಾನ ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಗಮನ ಸೆಳೆಯಬಯಸುತ್ತೇನೆ:-

## <u>ಸರ್ಕಾರದ ಹೇಳಿಕೆ</u>

ಇಲಾಖಾ ವ್ಯಾಪ್ತಿಯಲ್ಲಿ ಬರುವ ವಿಜಯಪುರ, ಬಾಗಲಕೋಟೆ, ಬೆಳಗಾವಿ ಮತ್ತು ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಗಳಲ್ಲಿ ಸರ್ಕಾರಿ ಹಾಗೂ ಅನುದಾನಿತ ಪದವಿ ಕಾಲೇಜಿನ ಪ್ರಾಧ್ಯಾಪಕರು ಹಾಗೂ ಪ್ರಾಚಾರ್ಯರ ಮತ್ತು ಬೋಧಕೇತರ ಸಿಬ್ಬಂದಿಗಳ ಮುಂಬಡ್ತಿಯ ಪ್ರಸ್ತಾವನೆಗಳು ಹಾಗೂ ಸ್ಥಗಿತ ವೇತನ ಬಡ್ತಿಯ ಪ್ರಸ್ತಾವನೆಗಳು, ಸೇವಾ ಸೌಲಭ್ಯಗಳು, ಪಿಂಚಣಿ ಉಪಧಾನಕ್ಕಾಗಿ ಸ್ವೀಕರಿಸಲಾದ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಅವಗಾಹನೆಗೆ ತರಲಾಗಿದೆ.

**ಸರ್ಕಾರಿ ಕಾಲೇಜುಗಳಿಗೆ ಸಂಬಂಧಿಸಿದಂತೆ:** ಸರ್ಕಾರಿ ಕಾಲೇಜುಗಳ ಸಹಾಯಕ/ಸಹ ಪ್ರಾಧ್ಯಾಪಕರುಗಳಿಗೆ ವೃತ್ತಿ ಪದೋನ್ನತಿಗೆ ಸಂಬಂಧಿಸಿದಂತೆ 06 ವಲಯಗಳನ್ನು ಸೇರಿಸಿ ಒಂದೇ ಘಟಕ ಎಂದು ಪರಿಗಣಿಸಲಾಗಿದೆ. ಆದಾಗ್ಯೂ ವಿಜಯಪುರ, ಬಾಗಲಕೋಟೆ, ಬೆಳಗಾವಿ ಮತ್ತು ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಗಳಲ್ಲಿ ನೀಡಲಾಗಿರುವ ವೃತ್ತಿ ಪದೋನ್ನತಿ ವಿವರ ಈ ಕಳಕಂಡಂತಿದೆ:

| ಕ್ರ. ಸಂ | ಜಿಲ್ಲೆ | ವೃತ್ತಿ ಪದೋನ್ನತಿ ನೀಡಲಾಗಿರುವ ಉಪನ್ಯಾಸಕರ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಸಂಖ್ಯೆ | ಈಗಾಗಲೇ ಬೋಧಕೇತರ ನೌಕರರಿಗೆ ನೀಡಲಾದ ಪದೋನ್ನತಿ ಸಂಖ್ಯೆ | ಬೋಧಕೇತರ ನೌಕರರ ಬಾಕಿಯಿರುವ ಪ್ರಕರಣಗಳ ಸಂಖ್ಯೆ |
|---|---|---|---|---|---|
| 01 | ಬಿಜಾಪುರ | 01 | 05 | 02 | 02 |
| 02 | ಬಾಗಲಕೋಟೆ | 08 | 02 | 03 | - |
| 03 | ಬೆಳಗಾವಿ | 10 | 01 | - | 01 |
| 04 | ಚಿಕ್ಕೋಡಿ | 04 | 01 | - | - |
| | **ಒಟ್ಟು** | **23** | **09** | **05** | **03** |

**ಷರಾ :**

1. ಉಪನ್ಯಾಸಕರ ಪದೋನ್ನತಿಗೆ ಸಂಬಂಧಿಸಿದಂತೆ ಬಾಕಿಯಿರುವ 09 ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲಾಗುವುದು.
2. ಪರಿಚಾರಕರ ಹುದ್ದೆಯಿಂದ ಅಟೆಂಡರ್ ಹುದ್ದೆಗೆ ಹಾಗೂ ಅಟೆಂಡರ್ ಹುದ್ದೆಯಿಂದ ದ್ವಿತೀಯ ದರ್ಜೆ ಸಹಾಯಕರ ಹುದ್ದೆ ಮತ್ತು ಬೆರಳಚ್ಚುಗಾರರ ಹುದ್ದೆಯಿಂದ ಹಿರಿಯ ಬೆರಳಚ್ಚುಗಾರರ ಹುದ್ದೆಗೆ ಬಡ್ತಿ ನೀಡುವ ಪ್ರಕ್ರಿಯೆ ಚಾಲನೆಯಲ್ಲಿದ್ದು, ಅರ್ಹತಾ ಪಟ್ಟಿ ಸಿದ್ಧಪಡಿಸುವ ಸಂಬಂಧ ಅಭ್ಯರ್ಥಿಗಳಿಂದ ಮಾಹಿತಿ/ದಾಖಲಾತಿಗಳನ್ನು ಅಪೇಕ್ಷಿಸಲಾಗುತ್ತಿದೆ.

**ಖಾಸಗಿ ಕಾಲೇಜುಗಳಿಗೆ ಸಂಬಂಧಿಸಿದಂತೆ : (ಕೇಂದ್ರ ಕಛೇರಿಯ ಮಾಹಿತಿ)**

| ಕ್ರ. ಸಂ | ಜಿಲ್ಲೆ | ವೃತ್ತಿ ಪದೋನ್ನತಿ ನೀಡಲಾಗಿರುವ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಸಂಖ್ಯೆ | ಈಗಾಗಲೇ ಬೋಧಕೇತರ ನೌಕರರಿಗೆ ನೀಡಲಾದ ಪದೋನ್ನತಿ ಸಂಖ್ಯೆ | ಬೋಧಕೇತರ ನೌಕರರ ಬಾಕಿಯಿರುವ ಪ್ರಕರಣಗಳ ಸಂಖ್ಯೆ |
|---|---|---|---|---|---|
| 01 | ಬಿಜಾಪುರ | 08 | 02 | 03 | - |
| 02 | ಬಾಗಲಕೋಟೆ | - | 13 | - | - |
| 03 | ಬೆಳಗಾವಿ | 16 | 02 | 02 | - |
| 04 | ಚಿಕ್ಕೋಡಿ | - | - | - | - |
| | ಒಟ್ಟು | 24 | 17 | 05 | - |

**ಖಾಸಗಿ ಕಾಲೇಜುಗಳಿಗೆ ಸಂಬಂಧಿಸಿದಂತೆ: (ಧಾರವಾಡ ಪ್ರಾದೇಶಿಕ ಕಛೇರಿಯ ಮಾಹಿತಿ)**

| ಕ್ರ.ಸಂ. | ಜಿಲ್ಲೆ | ವೃತ್ತಿ ಪದೋನ್ನತಿ ನೀಡಲಾಗಿರುವ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಸಂಖ್ಯೆ | ಈಗಾಗಲೇ ಬೋಧಕೇತರ ನೌಕರರಿಗೆ ನೀಡಲಾದ ಪದೋನ್ನತಿ ಸಂಖ್ಯೆ | ಬೋಧಕೇತರ ನೌಕರರ ಬಾಕಿಯಿರುವ ಪ್ರಕರಣಗಳ ಸಂಖ್ಯೆ |
|---|---|---|---|---|---|
| 01 | ಬಿಜಾಪುರ | 16 | 01 | 02 | 01 |
| 02 | ಬಾಗಲಕೋಟೆ | - | - | 05 | 05 |
| 03 | ಬೆಳಗಾವಿ | - | - | 01 | - |
| 04 | ಚಿಕ್ಕೋಡಿ | - | - | 16 | - |
| | ಒಟ್ಟು | 16 | 01 | 24 | 06 |

1) **ಸ್ಥಗಿತ ವೇತನ ಬಡ್ತಿಗೆ ಸಂಬಂಧಿಸಿದಂತೆ:**

| ಕ್ರ. ಸಂ | ಜಿಲ್ಲೆ | ಸ್ಥಗಿತ ವೇತನ ಬಡ್ತಿಗೆ ಸಂಬಂಧಿಸಿದಂತೆ ಸ್ವೀಕೃತಗೊಂಡಿರುವ ಪ್ರಕರಣಗಳ ಸಂಖ್ಯೆ | | ಈಗಾಗಲೇ ಇತ್ಯರ್ಥಮಾಡಿರುವ ಪ್ರಕರಣಗಳ ಸಂಖ್ಯೆ | | ಬಾಕಿಯಿರುವ ಪ್ರಕರಣಗಳ ಸಂಖ್ಯೆ | |
|---|---|---|---|---|---|---|---|
| | | ಸರ್ಕಾರಿ | ಖಾಸಗಿ | ಸರ್ಕಾರಿ | ಖಾಸಗಿ | ಸರ್ಕಾರಿ | ಖಾಸಗಿ |
| 01 | ಬಿಜಾಪುರ | 0 | 04 | 0 | 03 | 0 | 01 |
| 02 | ಬಾಗಲಕೋಟೆ | 0 | 02 | 0 | 02 | 0 | 0 |
| 03 | ಬೆಳಗಾವಿ | 0 | 01 | 0 | 01 | 0 | 0 |
| 04 | ಚಿಕ್ಕೋಡಿ | 0 | 01 | 0 | 01 | 0 | 0 |
| | ಒಟ್ಟು | **0** | **08** | **0** | **07** | **0** | **01** |

ಸರ್ಕಾರಿ ನೌಕರರಿಗೆ ದಿನಾಂಕ:14-06-2012ರ ಸಂಖ್ಯೆ:ಎಫ್‌ಡಿ/12/ಎಸ್ ಆರ್ ಪಿ 2012 (VII) ರನ್ವಯ ಸ್ಥಗಿತ ವೇತನ ಬಡ್ತಿಗಳನ್ನು 5 ರಿಂದ 8 ಕ್ಕೆ ಹೆಚ್ಚಿಸಿ ಆದೇಶಿಸಲಾಗಿದೆ. ಆದರೆ, ಸದರಿ ಸೌಲಭ್ಯವನ್ನು ಖಾಸಗಿ ಅನುದಾನಿತ ಕಾಲೇಜುಗಳಲ್ಲಿನ ರಾಜ್ಯ ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗೆ ವಿಸ್ತರಿಸಿರುವುದಿಲ್ಲ.

2) **ಸೇವಾ ಸೌಲಭ್ಯಗಳಿಗೆ ಸಂಬಂಧಿಸಿದಂತೆ**

| ಕ್ರ. ಸಂ. | ಜಿಲ್ಲೆ | ಸೇವಾ ಪೂರ್ವ ಅವಧಿ ಘೋಷಣೆ/ಪಿಹೆಚ್‌ಡಿ/ಸ್ವಾಪ್‌ಗ್ಯಾಪ್ ಸಂಬಂಧ ಸ್ವೀಕೃತಗೊಂಡಿರುವ ಪ್ರಕರಣಗಳ ಸಂಖ್ಯೆ | | ಈಗಾಗಲೇ ಇತ್ಯರ್ಥಮಾಡಿರುವ ಪ್ರಕರಣಗಳ ಸಂಖ್ಯೆ | | ಬಾಕಿಯಿರುವ ಪ್ರಕರಣಗಳ ಸಂಖ್ಯೆ | |
|---|---|---|---|---|---|---|---|
| | | ಸರ್ಕಾರಿ | ಖಾಸಗಿ | ಸರ್ಕಾರಿ | ಖಾಸಗಿ | ಸರ್ಕಾರಿ | ಖಾಸಗಿ |
| 01 | ಬಿಜಾಪುರ | 11 | 13 | 02 | 13 | 09 | 00 |
| 02 | ಬಾಗಲಕೋಟೆ | 03 | 16 | 03 | 13 | 00 | 03 |
| 03 | ಬೆಳಗಾವಿ | 11 | 00 | 11 | 00 | 00 | 00 |
| 04 | ಚಿಕ್ಕೋಡಿ | 01 | 455 | 00 | 451 | 01 | 04 |
| | ಒಟ್ಟು | **26** | **484** | **16** | **477** | **10** | **07** |

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಬಂಧಿಸಿದಂತೆ ಪಿಹೆಚ್‌ಡಿ ಪದವಿ ಪಡೆದಿರುವ ಅಧ್ಯಾಪಕರುಗಳಿಗೆ ಮುಂಗಡ ವೇತನ ಬಡ್ತಿಯನ್ನು ರಾಜ್ಯವ್ಯಾಪಿಯಾಗಿ ಮಂಜೂರು ಮಾಡಲು ನಿಯಮಾನುಸಾರ ಕ್ರಮ ವಹಿಸಲಾಗುತ್ತಿದೆ.

3) **ಪಿಂಚಣಿ ಉಪಧಾನಕ್ಕೆ ಸಂಬಂಧಿಸಿದಂತೆ:**

| ಕ್ರ. ಸಂ. | ಜಿಲ್ಲೆ | ಪಿಂಚಣಿ ಉಪಧಾನಕ್ಕೆ ಸಂಬಂಧಿಸಿದಂತೆ ಸ್ವೀಕೃತಗೊಂಡಿರುವ ಪ್ರಕರಣಗಳ ಸಂಖ್ಯೆ | | ಈಗಾಗಲೇ ಇತ್ಯಾರ್ಥಮಾಡಿರುವ ಪ್ರಕರಣಗಳ ಸಂಖ್ಯೆ | | ಬಾಕಿಯಿರುವ ಪ್ರಕರಣಗಳ ಸಂಖ್ಯೆ | |
|---|---|---|---|---|---|---|---|
| | | ಸರ್ಕಾರಿ | ಖಾಸಗಿ | ಸರ್ಕಾರಿ | ಖಾಸಗಿ | ಸರ್ಕಾರಿ | ಖಾಸಗಿ |
| 01 | ಬಿಜಾಪುರ | 0 | 32 | 0 | 29 | 0 | 03 |
| 02 | ಬಾಗಲಕೋಟೆ | 0 | 15 | 0 | 14 | 0 | 01 |
| 03 | ಬೆಳಗಾವಿ | 0 | 06 | 0 | 06 | 0 | 0 |
| 04 | ಚಿಕ್ಕೋಡಿ | 0 | 14 | 0 | 12 | 0 | 02 |
| | **ಒಟ್ಟು** | **0** | **67** | **0** | **61** | **0** | **06** |

ಧಾರವಾಡ, ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಯಿಂದ ಸ್ವೀಕೃತವಾಗಿರುವ ಪಿಂಚಣಿ ಪ್ರಸ್ತಾವನೆಗಳನ್ನು ಕಾಲಮಿತಿಯೊಳಗೆ ಇಲಾಖೆಯಲ್ಲಿ ವಿಲೇ ಮಾಡಲಾಗುತ್ತಿದೆ. ಈ ಕುರಿತು ಇಲಾಖಾ ಹಂತದಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ. ಧಾರವಾಡ, ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಯಲ್ಲಿ ವಿಳಂಬವಾಗಿರುವ ಪ್ರಕರಣಗಳಿದ್ದಲ್ಲಿ, ಅಂತಹ ಪ್ರಕರಣಗಳನ್ನು ಕೂಡಲೇ ವಿಲೇ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇಡಿ 67 ಯುಪಿಸಿ 2020

**(ಡಾ: ಅಶ್ವಥ್ ನಾರಾಯಣ ಸಿ.ಎನ್.)**
ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)